ಪವಿತ್ರತೆಯ ಆತ್ಮಿಕ ವ್ಯಕ್ತಿತ್ವದ ಸ್ಮೃತಿ ಸ್ವರೂಪ ಮೂಲಕ ಮಾಯಾಜೀತ್ರಾಗಿ

ಇಂದು ಸ್ನೇಹದ ಸಾಗರ ಬಾಪ್ದಾದಾರವರು ನಾಲ್ಕು ಕಡೆಯ ಸರ್ವ ಸ್ನೇಹಿ ಮಕ್ಕಳನ್ನು ನೋಡುತ್ತಿದ್ದರು. ಪ್ರತಿಯೊಬ್ಬ ಸ್ನೇಹಿ ಮಕ್ಕಳ ಮುಖದಲ್ಲಿ ಆತ್ಮಿಕ ವ್ಯಕ್ತಿತ್ವದ ಹೊಳಪನ್ನು ನೋಡುತ್ತಿದ್ದಾರೆ. ಹೊರಗಡೆಯ ರೂಪದಲ್ಲಿ ಸಾಧಾರಣ ವ್ಯಕ್ತಿತ್ವದವರಾಗಿದ್ದಾರೆ ಆದರೆ ಆತ್ಮಿಕ ವ್ಯಕ್ತಿತ್ವದಲ್ಲಿ ಎಲ್ಲರಕ್ಕಿಂತ ನಂಬರ್ಒನ್ ಆಗಿದ್ದಾರೆ. ಪ್ರಪಂಚದಲ್ಲಿ ಅನೇಕ ಪ್ರಕಾರದ ವ್ಯಕ್ತಿತ್ವಗಳ ಗಾಯನವಿದೆ. ಶರೀರದ ವ್ಯಕ್ತಿತ್ವ, ಯಾವುದೇ ವಿಶೇಷತೆಯ ವ್ಯಕ್ತಿತ್ವ ಮತ್ತು ಯಾವುದೇ ವಿಶೇಷ ಸ್ಥಾನದ ವ್ಯಕಿತ್ವ, ಆದರೆ ನಿಮ್ಮೆಲ್ಲರ ಚಹರೆಯ ಮೇಲೆ, ಚಲನೆಯಲ್ಲಿ ಯಾವ ವ್ಯಕ್ತಿತ್ವವಿದೆ? ಪವಿತ್ರತೆಯ ವ್ಯಕ್ತಿತ್ವ. ಪವಿತ್ರತೆಯ ವ್ಯಕ್ತಿತ್ವವಿದೆ. ಯಾರ-ಯಾರೆಷ್ಟು ಪವಿತ್ರವಾಗಿದ್ದಾರೆ ಅಷ್ಟು ಅವರ ವ್ಯಕ್ತಿತ್ವ ಕೇವಲ ಕಾಣಿಸುತ್ತದೆ ಆದರೆ ಅನುಭವವಾಗುತ್ತಿದೆ. ಎಲ್ಲರು ತಮ್ಮ ಆತ್ಮಿಕ ವ್ಯಕ್ತಿತ್ವವನ್ನು ಅನುಭವ ಮಾಡುತ್ತಿದ್ದೀರಾ? ನಿಮ್ಮ ಹಾಗೆ ವ್ಯಕ್ತಿತ್ವ ಸತ್ಯಯುಗದಿಂದ ಇಲ್ಲಿಯವರೆಗೆ ಯಾರದಾದರು ಇದ್ದಾರಾ? ಇಡೀ ಕಲ್ಪದಲ್ಲಿ ಹುಡುಕಿದರು ನಿಮ್ಮ ಹಾಗೆ ವ್ಯಕ್ತಿತ್ವದವರಿದ್ದಾರೆಯೇ? ಇಲ್ಲವಲ್ಲವೇ. ಅಂದಾಗ ತಮಗೆ ತಮ್ಮ ಆತ್ಮಿಕ ವ್ಯಕ್ತಿತ್ವದ ನಶೆಯಿದೆ. ಅನಾದಿ ಕಾಲದಲ್ಲಂತು ಪರಮಧಾಮದಲ್ಲಿಯೂ ನೀವು ವಿಶೇಷ ಆತ್ಮರ ವ್ಯಕ್ತಿತ್ವ ಎಲ್ಲರಕ್ಕಿಂತ ಶ್ರೇಷ್ಠವಾಗಿದೆ. ಭಲೇ ಆತ್ಮರೆಲ್ಲರೂ ಹೊಳೆಯುತ್ತಾರೆ ಆದರೆ ನೀವು ಆತ್ಮಿಕ ವ್ಯಕ್ತಿತ್ವದ ಆತ್ಮರ ಹೊಳಪು ಅನ್ಯ ಎಲ್ಲಾ ಆತ್ಮರಿಗಿಂತ ಭಿನ್ನ ಮತ್ತು ಪ್ರಿಯರಾಗಿದ್ದಾರೆ. ತಮ್ಮ ಅನಾದಿ ಕಾಲದ ವ್ಯಕ್ತಿತ್ವದ ಸ್ಮೃತಿಯಲ್ಲಿ ತೊಡಗಿಸಿ. ಸ್ಮೃತಿಯಲ್ಲಿ ಬಂತು. ನೋಡುತ್ತಿದ್ದಾರೆ. ಬಾಪ್ದಾದಾರವರ ಜೊತೆ-ಜೊತೆ ಹೇಗೆ ಆತ್ಮಿಕ ವ್ಯಕ್ತಿತ್ವದಲ್ಲಿ ಕಾಣಿಸುತ್ತಿದೆ. ತಮ್ಮನ್ನು ತಾವು ನೋಡುಕೊಳ್ಳುತ್ತಿದ್ದೀರಾ? ಅಂದಾಗ ಅನಾದಿ ಕಾಲದಲ್ಲಿ ಹೋಗಿಬಿಡಿ. ಎಷ್ಟು ಸಮಯದಲ್ಲಿ ಹೋಗಬಹುದು? ಹೋಗುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ಸೆಕೆಂಡ್ಕ್ಕಿಂತ ಕಡಿಮೆಯಲ್ಲವೇ! ಒಂದು ದಿನ, ಒಂದು ಘಂಟೆ ಬೇಕೆ? ಸೆಕೆಂಡ್ಗಿಂತಲೂ ಕಡಿಮೆ ಎಲ್ಲಿ ಬೇಕಾದರೂ ಅಲ್ಲಿ ತಲುಪಬಹುದು. ಅಂದಾಗ ಅನಾದಿ ಕಾಲದ ತಮ್ಮ ವ್ಯಕ್ತಿತ್ವವನ್ನು ನೋಡಿದ್ದೀರಾ? ಈಗ ಅನಾದಿ ಕಾಲದಿಂದ ಆದಿ ಕಾಲದಲ್ಲಿ ಬಂದುಬಿಡಿ. ಬಂದು ಬಿಟ್ಟಿದ್ದೀರಾ ಅಥವಾ ಈಗಲೂ ನಡೆಯುತ್ತಿದ್ದೀರಾ? ತಲುಪಿ ಬಿಟ್ಟಿದ್ದೀರಾ? ಅಂದಾಗ ಅನಾದಿ ಕಾಲದಿಂದ ಆದಿ ಕಾಲದಲ್ಲಿ ತಮ್ಮ ಆತ್ಮಿಕ ವ್ಯಕ್ತಿತ್ವವನ್ನು ನೋಡಿ – ಎಷ್ಟು ಶ್ರೇಷ್ಠ ವ್ಯಕ್ತಿತ್ವವಾಗಿದೆ! ತನುವಿನ, ಮನಸ್ಸಿನ, ಧನುವಿನ ಮತ್ತು ಸಂಬಂಧದ ವ್ಯಕ್ತಿತ್ವವಿದೆ. ಎಲ್ಲಾ ಪ್ರಕಾರದ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾಗಿದೆ. ಅಂದಾಗ ಆದಿಕಾಲದ ವ್ಯಕ್ತಿತ್ವವನ್ನು ನೋಡುತ್ತಿದ್ದೀರಾ? ಎಷ್ಟು ಸುಂದರವಾಗಿ ಕಾಣಿಸುತ್ತಿದ್ದೀರಿ, ಎಷ್ಟು ಶೃಂಗಾರಿತರಾಗಿದ್ದೀರಿ, ಎಷ್ಟು ಸುಖ, ಶಾಂತಿ, ಪ್ರೇಮ, ಆನಂದ ಸ್ವರೂಪವಾಗಿದ್ದಾಗ ಆದಿ ಕಾಲದಲ್ಲಿಯೂ ತಮ್ಮ ವ್ಯಕ್ತಿತ್ವವನ್ನು ನೋಡಿಕೊಳ್ಳಿರಿ. ಸ್ಪಷ್ಟವಾಗಿ ಕಾಣಿಸುತ್ತದೆಯೇ ಅಥವಾ 5 ಸಾವಿರ ವರ್ಷವಾಗಿರುವ ಕಾರಣ ಸ್ವಲ್ಪ ಸ್ಪಷ್ಟವಾಗಿ ಕಾಣಿಸುತ್ತದೆಯೇ? ಎಲ್ಲರಿಗೆ ಸ್ಪಷ್ಟವಾಗಿದೆಯೇ? ಎಲ್ಲರು ಬುದ್ಧಿವಂತರಾಗಿದ್ದೀರಿ. ಅಂದಾಗ ತಮ್ಮ ಆದಿ ಕಾಲವನ್ನು ನೋಡಿದ್ದೀರಿ. ಈಗ ಮಧ್ಯ ಕಾಲದಲ್ಲಿ ಬನ್ನಿ, ಮಧ್ಯಕಾಲದಲ್ಲಿಯೂ ತಮ್ಮ ವ್ಯಕ್ತಿತ್ವ ಏನಾಗಿದೆ? ತಮ್ಮ ಜಡಚಿತ್ರ ಎಷ್ಟು ವಿಧಿಪೂರ್ವಕ ಪೂಜೆ ಮತ್ತು ಗಾಯನ ಮಾಡಲಾಗುತ್ತದೆ. ಭಲೇ ಎಷ್ಟೇ ಧರ್ಮಾತ್ಮಾ, ಮಹಾತ್ಮಾ, ನೇತರು ವ್ಯಕ್ತಿತ್ವದವರ ಗಾಯನ ಮಾಡಲಿ ಆದರೆ ತಮ್ಮ ಜಡ ಚಿತ್ರಗಳ ವ್ಯಕ್ತಿತ್ವದ ಮುಂದೆ ಅವರ ವ್ಯಕ್ತಿತ್ವ ಏನು ಇಲ್ಲ. ಹೇಗೆ ನಿಮ್ಮೆಲ್ಲರ ಪೂಜೆಯಾಗುತ್ತದೆ ಹಾಗೆ ಯಾವುದೇ ಮಹಾತ್ಮ ಅಥವಾ ನೇತರ, ಧರ್ಮಾತ್ಮರ ಪೂಜೆಯಾಗುತ್ತದೆಯೇ? ಎಂದಾದರು ನೋಡಿದ್ದೀರಾ? ತಮ್ಮ ಜಡ ಚಿತ್ರಗಳಿಗಿಂತಲೂ ಶೃಂಗಾರ ಯಾರದ್ದಾಗುತ್ತದೆ? ಅಂದಾಗ ಮಧ್ಯಕಾಲದಲ್ಲಿಯೂ ನೀವು ಆತ್ಮರ ಪವಿತ್ರತೆಯ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾಗಿದೆ! ತಮ್ಮ ಚಿತ್ರವನ್ನು ನೋಡಿದ್ದೀರಾ? ತಮ್ಮ ಪೂಜೆಯಾಗುತ್ತದೆಯೇ ಇಲ್ಲವೇ? ಕೇವಲ ದೊಡ್ಡ-ದೊಡ್ಡವರದಾಗುತ್ತದೆ, ನಮ್ಮದಲ್ಲ! ಡಬಲ್ ವಿದೇಶಿಯರ ಮಂದಿರಗಳಿವೆಯೇ? ನೋಡಿದ್ದೀರಾ, ಅದರಲ್ಲಿ ತಮ್ಮ ಚಿತ್ರವಿದೆಯೇ? ಕೇಳಿದ್ದೀರೆಂದಾಗ ಇರಬಹುದೆಂದು ಹೇಳುತ್ತೀರೋ! ಸ್ಮೃತಿಯಲ್ಲಿದೆಯೇ? ಅಂದಾಗ ಮಧ್ಯಕಾಲದ ತಮ್ಮ ಅತೀ ಶ್ರೇಷ್ಠವಾಗಿದೆ ಮತ್ತು ಈಗ ಅಂತಿಮ ಜನ್ಮದಲ್ಲಿ ಯಾವ ಮರುಜೀವಾ ಬ್ರಾಹ್ಮಣ ಜನ್ಮವಿದೆ ಅದರ ವ್ಯಕ್ತಿತ್ವವನ್ನು ನೋಡಿ ಎಷ್ಟು ದೊಡ್ಡದಾಗಿದೆ. ಗಾಯನ ಎಷ್ಟಿದೆ – ಯಾವುದೇ ಶ್ರೇಷ್ಠ ಕಾರ್ಯ ಈಗಲೂ ನಿಮ್ಮ ನಾಮಧಾರಿ ಬ್ರಾಹ್ಮಣರೇ ಮಾಡುತ್ತಾರೆ. ಭಲೇ ಬ್ರಾಹ್ಮಣರು ಈಗ ಬ್ರಾಹ್ಮಣರಾಗಿಲ್ಲ ಆದರೆ ಹೆಸರಿನ ಬ್ರಾಹ್ಮಣರಿದ್ದಾರಲ್ಲವೇ! ನಿಮ್ಮ ಹೆಸರಿನಿಂದ ನಿಮ್ಮ ವ್ಯಕ್ತಿತ್ವದ ಕಾರಣ ಅವರನ್ನು ಶ್ರೇಷ್ಠರೆಂದು ಗಾಯನ ಮಾಡಲಾಗುತ್ತದೆ. ಅಂದಾಗ ಬ್ರಾಹ್ಮಣ ಜನ್ಮದ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾಗಿದೆ! ಆದಿಕಾಲ, ಅನಾದಿ ಕಾಲ, ಮಧ್ಯ ಕಾಲ ಮತ್ತು ಈಗ ಅಂತ್ಯ ಕಾಲ - ಇಡೀ ಕಲ್ಪದಲ್ಲಿ ನಿಮ್ಮ ವ್ಯಕ್ತಿತ್ವ ಸದಾ ಮಹಾನವಾಗಿದೆ.

ಲೌಕಿಕ ವ್ಯಕ್ತಿತ್ವದವರ ಒಂದುವೇಳೆ ಹೆಸರು ಬಂದರೆ ಯಾವುದೇ ವಿಶೇಷ ಪುಸ್ತಕದಲ್ಲಿ ಅವರ ಹೆಸರು ಬರುವುದು – ಇಂತಹವರು ಇಂತಹವರಾಗಿದ್ದಾರೆ. ಆದರೆ ನಿಮ್ಮ ಯಾವುದರಲ್ಲಿ ಬರುವುದು? ಸಾಧಾರಣ ಪುಸ್ತಕದಲ್ಲಿ ಬರುವುದಿಲ್ಲ, ಶಾಸ್ತ್ರಗಳಲ್ಲಿ ಬರುವುದು. ಯಾವುದೆಲ್ಲ ಶಾಸ್ತ್ರಗಳು ಆದಿಕಾಲದಿಂದ ಮಾಡಲ್ಪಟ್ಟಿವೆ ಅದರಲ್ಲಿ ಯಾರ ಚರಿತ್ರೆಯಿದೆ? ಯಾರ ಗಾಯನವಿದೆ? ಯಾರ ಕಥೆಗಳಿವೆ? ಅಂದಾಗ ಲೌಕಿಕ ವ್ಯಕ್ತಿತ್ವದವರ ಗಾಯನ ವಿಶೇಷ ಪುಸ್ತಕಗಳಲ್ಲಿ ಆಗುತ್ತದೆ ಮತ್ತು ನಿಮ್ಮ ಗಾಯನ ಶಾಸ್ತ್ರಗಳಲ್ಲಿ ಆಗುತ್ತದೆ ಮತ್ತು ಶಾಸ್ತ್ರಗಳ ಎಷ್ಟು ಗೌರವ ಕೊಡುತ್ತಾರೆ. ಬಹಳ ವಿಧಿಪೂರ್ವಕ ಶಾಸ್ತ್ರಗಳನ್ನು ಸಂಭಾಲನೆ ಮಾಡುತ್ತಾರೆ,

ಅವುಗಳನ್ನೂ ದೊಡ್ಡ ಪೂಜ್ಯ ರೂಪದಲ್ಲಿ ನೋಡುತ್ತಾರೆ. ಯಾರು ಸತ್ಯ ಭಕ್ತರಿದ್ದಾರೆ ಅವರು ಶಾಸ್ತ್ರಗಳನ್ನು ವಿಧಿಪೂರ್ವಕ ಇಟ್ಟುಕೊಳ್ಳುತ್ತಾರೆ ಮತ್ತು ಓದುತ್ತಾರೆ. ಪುಸ್ತಕದ ರೂಪದಲ್ಲಿ ಇಡುವುದಿಲ್ಲ. ತಮ್ಮ ಪವಿತ್ರತೆಯ ವ್ಯಕ್ತಿತ್ವವನ್ನು ಸದಾ ಇಮರ್ಜ್ ರೂಪದಲ್ಲಿ ಸ್ಮೃತಿಯಲ್ಲಿಟ್ಟುಕೊಳ್ಳಿರಿ. ತಿಳಿದುಕೊಳ್ಳುತ್ತಾರೆ... ನಾವೇ... ಈ ರೀತಿ ಮರ್ಜ್ ಅಲ್ಲ. ಸ್ಮೃತಿ ಸ್ವರೂಪದಲ್ಲಿಟ್ಟುಕೊಳ್ಳಿರಿ. ಯಾರ ಬುದ್ಧಿಯಲ್ಲಿ ಇದು ಇಮರ್ಜ್ ರೂಪದಲ್ಲಿ ಸ್ಮೃತಿಯಿರುತ್ತದೆಯೆಮ್ದರೆ ಸ್ಮೃತಿಯೇ ಸಮರ್ಥತೆಯ ಆಧಾರವಾಗಿದೆ. ಮತ್ತು ಎಲ್ಲಿ ಸಮರ್ಥತೆಯಿರುತ್ತದೆ ಅಲ್ಲಿ ಮಾಯೆಯು ಬರಲು ಸಾಧ್ಯವೇ? ಸಮರ್ಥ ಆತ್ಮರ ಹತ್ತಿರ ಮಾಯೆಯು ಬರುವುದು ಅಸಂಭವವಾಗಿದೆ. ಪರಿಶ್ರಮ ಪಡುವ ಅವಶ್ಯಕತೆಯಿಲ್ಲ. ಮಾಯೆಯ ಕೆಲಸವಾಗಿದೆ ಬರುವುದು ಆದರೆ ನಿಮ್ಮ ಕೆಲಸವಾಗಿದೆ ಈಗ ಸಮಯ ಪ್ರಮಾಣ ಓಡಬಾರದು. ಮಾಯೆಯು ಬಂದಿತು ಮತ್ತು ಓಡಿಸಿದೆವು. ಇಲ್ಲ, ನಿಮ್ಮ ಕೆಲಸವಾಗಿದೆ ಸದಾ ಮಾಯಾಜೀತ್ ಆಗಿರುವುದು. ಅಂದಾಗ ಮಾಯಾಜೀತ್ರಾಗಿದ್ದೀರಾ ಅಥವಾ ಮಾಯೆಯನ್ನು ಪದೇ ಪದೇ ಓಡಿಸುವಂತಹವರಾಗಿದ್ದೀರಾ? ಈಗ ಓಡ ಬೇಕಾಗುತ್ತದೆ, ಸ್ವಲ್ಪ- ಸ್ವಲ್ಪ ಅದು ದರ್ಶನ ಕೊಡುವುದಕ್ಕೆ ಬಂದು ಬಿಡುತ್ತದೆ! ಇಲ್ಲವಲ್ಲವೇ! ಡಬಲ್ ವಿದೇಶಿಯರು ಮಾಯೆಯನ್ನು ಸದಾಕಾಲಕ್ಕೆ ಓಡಿಸಿದ್ದೀರಾ? ಅಥವಾ ಓಡಿಸುತ್ತಲೇ ಇರುತ್ತೀರಾ? ಹೇಗಿದ್ದೀರಿ? ಮಾಯೆಯು ಸದಾಕಾಲಕ್ಕೆ ಓಡಿ ಹೋಗಿತೆ? ಈಗ ಬರುವುದಿಲ್ಲವೇ? ಸ್ವಲ್ಪ-ಸ್ವಲ್ಪ ಬರುವುದು, ಏನು ಪರವಾಗಿಲ್ಲ? ಆದರು ಅರ್ಧ ಕಲ್ಪದ ಸ್ನೇಹ, ಸ್ನೇಹಿತವಾಗಿದೆಯಲ್ಲವೇ! ಅದನ್ನು ಹಾಗೆ ಬಿಟ್ಟುಬಿಡೋಣ, ಬರುವುದೇ ಬೇಡ. ಕೇಳಿದೆವೆಲ್ಲವೇ ಸಮಯ ಸಮಾಪ್ತಿಯಾಗುವುದರ ಮೊದಲೇ ಬಹಳ ಸಮಯದಿಂದ ಮಾಯಾಜೀತ್ರಾಗುವ ಅಭ್ಯಾಸ ಬೇಕು. ಅಂತ್ಯದಲ್ಲಿ ಆಗಲು ಸಾಧ್ಯವಿಲ್ಲ. ಒಂದುವೇಳೆ ಅಂತ್ಯದಲ್ಲಿ ಮಾಯಾಜೀತ್ರಾಗುವ ಪುರುಷಾರ್ಥ ಮಾಡಿದರೂ ಏನಾಗುವುದು? ಬಾಪ್ದಾದಾರವರು ಗಿಳಿಯ ಕಥೆಯನ್ನು ಹೇಳುತ್ತಾರಲ್ಲವೇ ಗಿಳಿಗೆ ಹೇಳುತ್ತಾರೆ ನಳದ ಮೇಲೆ ಕುಳಿತುಕೊಳ್ಳಬೇಡ, ಆದರೆ ಅದು ನಳದ ಮೇಲೆಯೇ ಕುಳಿತು ಹೇಳುತ್ತಿತ್ತು. ಇದೆ ರೀತಿ ಅಂತ್ಯ ಕಾಲದಲ್ಲಿ ಒಂದುವೇಳೆ ಬಹಳ ಸಮಯದ ಅಭ್ಯಾಸವಿಲ್ಲವೆಂದರೆ ಮನಸ್ಸಿನಲ್ಲಿ ಯೋಚಿಸುತ್ತೀರಿ ನಾನು ಆತ್ಮನಾಗಿದ್ದೇನೆ, ನಾನು ಆತ್ಮನಾಗಿದ್ದೇನೆ, ಆದರೆ ಮಾಯ ಪ್ರಭಾವವು ಆಗುತ್ತಿರುತ್ತದೆ, ಮತ್ತೆ ಪ್ರಯುತ್ನವು ಮಡುತ್ತೀರಿ ನಾನು ಆತ್ಮನಾಗಿದ್ದೇನೆ, ನಾನು ಆತ್ಮನಾಗಿದ್ದೇನೆ ಆದರೆ ಆಗುವುದಿಲ್ಲ. ಅದಕ್ಕೆ ಏನು ಮಾಡಬೇಕು? ಈಗಿನಿಂದಲೇ ಮಾಯಾಜೀತ್ರಾಗುವ ಅಭ್ಯಾಸ ಮಾಡಿ. ಮತ್ತು ಅದಕ್ಕೆ ಸಹಜ ಸಾಧನವಾಗಿದೆ ತಮ್ಮ ಆತ್ಮಿಕ ವ್ಯಕ್ತಿತ್ವವನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ. ವ್ಯಕ್ತಿತ್ವದವರ ಲಕ್ಷಣ ಏನಾಗಿದೆ? ಯಾರದು ಶ್ರೇಷ್ಠ ವ್ಯಕ್ತಿತ್ವದವರಾಗಿರುತ್ತಾರೆ ಎಲ್ಲಿಯೂ, ಯಾರಲ್ಲಿಯೂ ದೃಷ್ಟಿ ಹೋಗುವುದಿಲ್ಲ. ಇದು ಹೀಗಿದೆ, ಇವರು ಹೀಗಿದ್ದಾರೆ, ಇವರು ಹೀಗೆ ಮಾಡುತ್ತಾರೆ, ಇವರು ಹೀಗೆ ಮಾಡುತ್ತಾರೆ, ನಾನು ಏಕೆ ಮಾಡಬಾರದು, ನಾನು ಏಕೆ ಮಾಡಲು ಸಾಧ್ಯವಿಲ್ಲ... ಬೇರೆಯವರ ಪ್ರಾಪ್ತಿಯಲ್ಲಿ ದೃಷ್ಟಿ ಹೋಗುವುದಿಲ್ಲ. ಏಕೆ? ಆತ್ಮಿಕ ವ್ಯಕ್ತಿತ್ವಯುಳ್ಳವರು ಸರ್ವ ಪ್ರಾಪ್ತಿಗಳಿಂದ ಸಂಪನ್ನರಾಗಿದ್ದಾರೆ. ಸ್ವಭಾವದಲ್ಲಿಯೂ ಸಂಪನ್ನ, ಸಂಸ್ಕಾರದಲ್ಲಿಯೂ ಸಂಪನ್ನ - ಸಂಬಂಧದಲ್ಲಿಯೂ ಸಂಪನ್ನ. ಅವರು ಎಂದೂ ತಮ್ಮ ಪ್ರಾಪ್ತಿಗಳ ಭಂಡಾರದಲ್ಲಿ ಯಾವುದೇ ಅಪ್ರಾಪ್ತಿ ಅನುಭವವೇ ಮಾಡುವುದಿಲ್ಲ. ಏಕೆ? ಆತ್ಮಿಕ ವ್ಯಕ್ತಿತ್ವದ ಕಾರಣ ಅವರು ಸದಾ ಮನಸ್ಸಿನಿಂದ ಸಂಪನ್ನರಾಗುವ ಕಾರಣ ಸಂತುಷ್ಟರಾಗಿರುತ್ತಾರೆ. ನಮ್ಮ ದೃಷ್ಟಿ ಬೇರೆಯವರ ಪ್ರಾಪ್ತಿಯಲ್ಲಿ ಯಾವಾಗ ಹೋಗುತ್ತದೆಯೆಂದರೆ ಯಾವಾಗ ತಮ್ಮಲ್ಲಿ ಅಪ್ರಾಪ್ತಿ ಅನುಭವ ಮಾಡುವಿರಿ. ಅಂದಾಗ ಯಾವುದೇ ಅಪ್ರಾಪ್ತಿ ಇದೆಯೇ? ಗೀತೆ ಏನು ಹಾಡುವಿರಿ – ಅಪ್ರಾಪ್ತ ಯಾವುದೇ ವಸ್ತುವಿಲ್ಲ ಬ್ರಾಹ್ಮಣರ ಖಜಾನೆಯಲ್ಲಿ. ಈ ಗೀತೆಯನ್ನು ಮುಖದಿಂದಲ್ಲ, ಮನಸ್ಸಿನಿಂದ ಹಾಡುತ್ತೀರಾ? ಯಾರು ಹಾಡುತ್ತಾರೋ ಅವರು ಕೈ ಎತ್ತಿ. ಒಳ್ಳೆಯದು, ಡಬಲ್ ವಿದೇಶಿಯರು ಗೀತೆಯನ್ನು ಹಾಡುತ್ತೀರಾ? ಒಳ್ಳೆಯದು.

ಬಾಪ್ದಾದಾರವರು ಇಂದು ನಾಲ್ಕಾರು ಕಡೆಯ ಮಕ್ಕಳ ಪವಿತ್ರತೆಯ ವ್ಯಕ್ತಿತ್ವವನ್ನು ಪರಿಶೀಲಿಸುತ್ತಿದ್ದಾರೆ. ಪವಿತ್ರತೆಯ ಪರಿಭಾಷೆಯನ್ನು ಒಳ್ಳೆಯ ರೀತಿಯಲ್ಲಿ ತಿಳಿದುಕೊಂಡಿದ್ದೀರಿ. ಪವಿತ್ರತೆ ಕೇವಲ ಬ್ರಹ್ಮಚರ್ಯ ವ್ರತವಲ್ಲ, ಬ್ರಹ್ಮಚರ್ಯದಲ್ಲಿ ಇತ್ತಿಚೆಗಿನ ಪರಿಸ್ಥಿತಿಯ ಅನುಸಾರ ಕೆಲವು ಅಜ್ಞಾನಿಯು ಆಗಿದ್ದರು. ಜ್ಞಾನದಿಂದಲ್ಲ ಆದರೆ ಪರಿಸ್ಥಿತಿಯನ್ನು ನೋಡಿದರು. ಕೆಲವರು ಭಕ್ತರಿರುತ್ತಾರೆ. ಅದೇನು ದೊಡ್ಡ ಮಾತಲ್ಲ. ಆದರೆ ಪವಿತ್ರತೆಯನ್ನು ಇಡೀ ದಿನದಲ್ಲಿ ಚೆಕ್ ಮಾಡಿರಿ - ಪವಿತ್ರತೆಯ ಲಕ್ಷಣವಾಗಿದೆ ಸ್ವಚ್ಛತೆ, ಸತ್ಯತೆ. ಒಂದುವೇಳೆ ಇಡೀ ದಿನದಲ್ಲಿ ಭಲೇ ಏಳುವುದರಲ್ಲಿ, ಭಲೇ ಕುಳಿತುಕೊಳ್ಳುವುದರಲ್ಲಿ, ಭಲೇ ಮಾತನಾಡುವುದರಲ್ಲಿ, ಭಲೇ ಸೇವೆ ಮಾಡುವುದರಲ್ಲಿ, ಭಲೇ ಸ್ಥೂಲ ಸೇವೆಯ ಅಥವಾ ಸೂಕ್ಷ್ಮ ಸೇವೆಯ ಆದರೆ ವಿಧಿಪೂರ್ವಕವಿಲ್ಲ, ವಿಧಿಯಲ್ಲಿಯೂ ಒಂದುವೇಳೆ ಸ್ವಲ್ಪ ಅಂತರವಿದ್ದಾಗ ಅವರು ಸ್ವಚ್ಛತೆ ಅರ್ಥಾತ್ ಪವಿತ್ರತೆಯಿಲ್ಲ. ವ್ಯರ್ಥ ಸಂಕಲ್ಪವೂ ಅಪವಿತ್ರತೆಯಾಗಿದೆ. ಏಕೆ? ನೀವು ಯೋಚಿಸುತ್ತೀರಿ ನಾವಂತು ಪಾಪವನ್ನು ಮಾಡಿಲ್ಲ, ಯಾರಿಗೂ ದುಃಖವನ್ನು ಕೊಟ್ಟಿಲ್ಲ ಆದರೆ ಒಂದುವೇಳೆ ವ್ಯರ್ಥ ನಡತೆ, ಸಮಯ ಹೋಯಿತು, ಸಂಕಲ್ಪ ಹೋಯಿತು, ಸಂತುಷ್ಟತೆ ಹೋಯಿತು ಅಂದಾಗ ನಿಮ್ಮ ಪವಿತ್ರತೆಯ ಫೈನಲ್ ಸ್ಟೇಜ್ನ ಡಿಗ್ರೀಯಲ್ಲಿ ಅಂತರವಾಗುತ್ತದೆ. 16 ಕಲಾರಾಗಲು ಸಾಧ್ಯವಿಲ್ಲ. 15 ಕಲಾ, 14 ಕಲಾ, 15 1/2 ಕಲಾ... ನಂಬರ್ವಾರ ಆಗಿ ಬಿಡುವುದು. ಅಂದಾಗ ಅಪವಿತ್ರತೆ ಕೇವಲ ಯಾರಿಗೆ ದುಃಖ ಕೊಡುವುದು ಅಥವಾ ಪಾಪ ಕರ್ಮ ಮಾಡುವುದಿಲ್ಲ ಆದರೆ ಸ್ವಯಂದಲ್ಲಿ ಸತ್ಯತೆ, ಸ್ವಚ್ಛತೆ ವಿಧಿಪೂರ್ವಕ ಒಂದುವೇಳೆ ಅನುಭವ ಮಾಡುತ್ತೀರೆಂದರೆ ಪವಿತ್ರವಾಗಿದ್ದೀರಿ. ಹೊರ ಬಂತು, ಹೇಳಬಾರದಾಗಿತ್ತು ಆದರೆ ಹೇಳಿಬಿಟ್ಟೆವು, ಅಂದಾಗ ಇದನ್ನು ಏನೆಂದು ಹೇಳುವಿರಿ? ಮಾಲೀಕರಾಗಿದ್ದೀರಿ? ಇದಕ್ಕಾಗಿ ಅಮೃತವೇಳೆಯಿಂದ ಹಿಡಿದು ರಾತ್ರಿಯವರೆಗು ತಮ್ಮ ಸಂಕಲ್ಪ, ಮಾತು, ಕರ್ಮ, ಸೇವೆ – ಎಲ್ಲವನ್ನು ಚೆಕ್ ಮಾಡಿ. ದೊಡ್ಡ ರೂಪದಿಂದ ಚೆಕ್ ಮಾಡಬೇಡಿ. ಒಂದುವೇಳೆ ದೊಡ್ಡ ರೂಪದಿಂದ ಚೆಕ್ ಮಾಡಿದರೆಂದಾಗ ನೋಡಿ ಚಂದ್ರವಂಶಿಯ ದೊಡ್ಡ

ಲಕ್ಷಣ ಬಿಲ್ಲು-ಬಾಣವನ್ನು ಕೊಟ್ಟಿದ್ದಾರೆ ಮತ್ತು ಸೂರ್ಯವಂಶಿಯರಿಗೆ ಎಷ್ಟು ಚಿಕ್ಕ ಮುರುಳಿ ಕೊಟ್ಟು ಬಿಟ್ಟಿದ್ದಾರೆ. ಮುರುಳಿ ಎಷ್ಟು ಹಗುರವಾಗಿದೆ. ಮತ್ತು ಬಿಲ್ಲು-ಬಾಣ ಎಷ್ಟು ಪರಿಶ್ರಮದ್ದಾಗಿದೆ. ಮೊದಲು ಗುರಿಯನ್ನು ಇಡಿ, ಇನ್ನೊಂದು ಹೊರೆಯನ್ನು ಎತ್ತುತ್ತೀರಿ. ಮತ್ತು ಮುರುಳಿಯನ್ನು ನೋಡಿ - ನೃತ್ಯ ಮಾಡಿ, ಹಾಡಿರಿ, ನಗಿ, ಆಟ ಆಡಿರಿ. ಅಂದಾಗ ಇದಕ್ಕಾಗಿ ದೊಡ್ಡ – ದೊಡ್ಡ ರೂಪದಿಂದ ಪುರುಷಾರ್ಥವನ್ನು ಇಟ್ಟುಕೊಳ್ಳಬೇಡಿ, ಚೆಕಿಂಗ್ ಇಟ್ಟುಕೊಳ್ಳಬೇಡಿ. ಈಗ ಸೂಕ್ಷ್ಮ ಬುದ್ಧಿಯವರಾಗಿ ಏಕೆಂದರೆ ಸಮಯದ ಸಮಾಪ್ತಿ ಅಚಾನಕ್ಕಾಗಿ ಹೋಗುವುದಾಗಿದೆ, ಹೇಳಿ ಆಗುವುದಿಲ್ಲ. ಬಾಪ್ದಾದಾರವರಂತು ಮೊದಲೇ ಹೇಳಿದ್ದಾರೆ ಯಾವುದೇ ದೂರು ಕೊಡಬಾರದು - ಬಾಬಾ, ನೀವು ಏಕೆ ಹೇಳಿಲ್ಲ? ತಂದೆಯು ಎಂದೂ ಟೈಮ್ ಕಾನ್ಸ್ ಆಗುವುದಿಲ್ಲ. ಈಗಲೇ ಪೂರ್ಣ ಡೈಮಂಡ್ (ವಜ್ರ) ಆಗಬೇಕು. ಇದನ್ನು ಪ್ರಾಮಿಸ್ ಮಾಡಿದರಲ್ಲವೇ? ಡೈಮಂಡ್ ಜುಬಿಲಿ ಆಚರಿಸುತ್ತಿದ್ದೀರಾ ಅಥವಾ ಡೈಮಂಡ್ ಆಗುವಿರಾ? ಏನು ಮಾಡುವಿರಿ? ಆಗಬೇಕಾ ಅಥವಾ ಆಚರಿಸಬೇಕಾ. ಎರಡು ಜೊತೆ-ಜೊತೆ ಮಾಡಬೇಕು. ಬಾಪ್ದಾದಾರವರು ಮುಂದಿನ ವರ್ಷದಲ್ಲಿ ಚೆಕ್ ಮಾಡಿ - ಪ್ರಾಮಿಸ್ನ್ನು ನಿಭಾಯಿಸಿ ಅಥವಾ ಕೇವಲ ಮುಖವನ್ನು ಮಧುರ ಮಾಡಿಕೊಂಡಿದ್ದೀರಾ? ಅಂದಾಗ ಯಾರಾಗಿದ್ದೀರಿ? ಕೇವಲ ಹೇಳುವವರಾಗಿದ್ದೀರಿ ಅಥವಾ ನಿಭಾಯಿಸುವಂತಹರಾಗಿದ್ದೀರಾ? ಒಳ್ಳೆಯದು! ನೋಡಿ, ಟಿ.ವಿ. ಯಲ್ಲಿ ನೀಮ್ಮೆಲ್ಲರ ಫೋಟೊ ಬರುತ್ತಿದೆ, ನಂತರ ಬದಲಾಗಬೇಡಿ - ನಾನಿರಲಿಲ್ಲ, ನಾನು ಹೇಳಿಲ್ಲ! ಆಗುವುದಂತು ಒಳ್ಳೆಯದಲ್ಲವೇ, ಯಾವುದೇ ಒಳ್ಳೆಯ ಮಾತಾಗಿದೆ ಅದನ್ನು ಬೇಗ ಮಾಡಬೇಕೆ ಅಥವಾ ತಡವಾಗಿ ಮಾಡಬೇಕಾ? ಬೇಗ ಮಾಡಬೇಕಲ್ಲವೇ!

ಸೆಕೆಂಡಿನಲ್ಲಿ ಎವರರೆಡಿ ಆಗಬಹುದೇ? ಸೆಕೆಂಡಿನಲ್ಲಿ ಅಶರೀರಿಯಾಗಬಹುದೇ? ಅಥವಾ ಯುದ್ಧ ಮಾಡಬೇಕಾಗುತ್ತದೆಯೇ, ನಾನು ಶರೀರವಲ್ಲ, ನಾನು ಶರೀರವಲ್ಲ,.... ಈ ರೀತಿಯಿಲ್ಲವೇ! ಯೋಚಿಸಿದೆವು ಮತ್ತು ಆಯಿತು. ಯೋಚಿಸುವುದು ಮತ್ತು ಸ್ಥಿತರಾಗುವುದು. (ಬಾಪ್ದಾದಾರವರು ಕೆಲವು ನಿಮಿಷಗಳವರೆಗೆ ಡ್ರಿಲ್ ಮಾಡಿಸಿದರು) ಚೆನ್ನಾಗೆನಿಸುತ್ತದೆಯೇ! ಅಂದಾಗ ಇಡೀ ದಿನದಲ್ಲಿ ಮಧ್ಯ-ಮಧ್ಯದಲ್ಲಿ ಇದನ್ನು ಅಭ್ಯಾಸ ಮಾಡಿ. ಎಷ್ಟೇ ಬಿಜಿಯಾಗಿರಿ ಆದರೆ ಮಧ್ಯ ಮಧ್ಯದಲ್ಲಿ ಒಂದು ಸೆಕೆಂಡ್ ಸಹ ಅಶರೀರಿಯಾಗುವ ಅಭ್ಯಾಸ ಅವಶ್ಯ ಮಾಡಿರಿ. ಇದಕ್ಕಾಗಿ ಯಾರು ಹೇಳುವುದಿಲ್ಲ - ನಾನು ಬಿಜಿಯಾಗಿದ್ದೇನೆ. ಒಂದು ಸೆಕೆಂಡ್ನ್ನು ತೆಗೆಯಲೇಬೇಕು, ಅಭ್ಯಾಸ ಮಾಡಲೇಬೇಕು. ಒಂದುವೇಳೆ ಯಾರಾದರೊಂದಿಗೆ ಮಾತನಾಡುತ್ತಿದ್ದರೂ, ಯಾರ ಜೊತೆಗೆ ಕಾರ್ಯ ಮಾಡುತ್ತಿದ್ದರೂ, ಅವರಿಗೂ ಸಹ ಒಂದು ಸೆಕೆಂಡ್ ಈ ಡ್ರಿಲ್ ಮಾಡಿಸಿ, ಏಕೆಂದರೆ ಸಮಯ ಪ್ರಮಾಣ ಈ ಅಶರೀರಿತನದ ಅನುಭವ, ಈ ಅಭ್ಯಾಸ ಯಾರದು ಹೆಚ್ಚಾಗುತ್ತದೆ ಅವರು ಹೆಚ್ಚು ನಂಬರ್ ತೆಗೆದುಕೊಳ್ಳುವರು ಏಕೆಂದರೆ ಸಮಯದ ಸಮಾಪ್ತಿ ಅಚಾನಕ್ ಆಗುತ್ತದೆ ಎಂದು ಬಾಪ್ದಾದಾರವರು ತಿಳಿಸಿದ್ದರು. ಅಶರೀರಿಯಾಗುವ ಅಭ್ಯಾಸವಿದ್ದರೆ ತಕ್ಷಣ ಸಮಯದ ಸಮಾಪ್ತಿಯ ವೈಬ್ರೆಷನ್ ಬರುವುದು ಇದಕ್ಕಾಗಿ ಈಗಿನಿಂದಲೇ ಅಭ್ಯಾಸ ಹೆಚ್ಚಿಸಿಕೊಳ್ಳಿರಿ. ಈ ರೀತಿಯಲ್ಲ, ಮುಂದಿನ ವರ್ಷದಲ್ಲಿ ಡೈಮಂಡ್ ಜುಬಿಲಿಯಾಗಿದೆ ಅಂದಾಗ ಈಗ ಮಾಡಬಾರದು, ಅಂತ್ಯ ಮಾಡಬೇಕು. ಎಷ್ಟು ಬಹಳ ಕಾಲ ಅಭ್ಯಾಸ ಮಾಡುವರು ಅಷ್ಟು ರಾಜ್ಯ ಭಾಗ್ಯದ ಪ್ರಾಪ್ತಿಯಲ್ಲಿನಂಬರ್ ಹೆಚ್ಚು ತೆಗೆದುಕೊಳ್ಳುವಿರಿ. ಒಂದುವೇಳೆ ಮಧ್ಯ-ಮಧ್ಯದಲ್ಲಿ ಈ ಅಭ್ಯಾಸ ಮಾಡಿದರೆ ಸ್ವತಃ ಶಕ್ತಿಶಾಲಿ ಸ್ಥಿತಿ ಸಹಜ ಅನುಭವ ಮಾಡಿರಿ. ಈ ಚಿಕ್ಕ-ಚಿಕ್ಕ ಮಾತುಗಳಲ್ಲಿ ಯಾರು ಪುರುಷಾರ್ಥ ಮಾಡಬೇಕಾಗುತ್ತದೆ ಅದೆಲ್ಲ ಸಹಜವಾಗಿ ಸಮಾಪ್ತಿಯಾಗಿ ಬಿಡುವುದು.

ಒಳ್ಳೆಯದು. ಎಲ್ಲರು ಖುಷಿಯಾಗಿದ್ದೀರಾ ಅಥವಾ ಕೇಳಬೇಕಾ? ಮಾತೆಯರು ಖುಷಿಯಾಗಿದ್ದೀರಾ? ಬಹಳ ಒಳ್ಳೆಯದು. ನೋಡಿ, ಎಲ್ಲೆಲ್ಲಿಂದ ಮೇಳೆಯಲ್ಲಿ ತಲುಪಿ ಬಿಟ್ಟಿದ್ದೀರಿ. ಒಳ್ಳೆಯ ಅವಕಾಶ ಸಿಕ್ಕಿದೆಯಲ್ಲ, ಇಲ್ಲವೆಂದರೆ ದಿನದ ನಿರೀಕ್ಷಿಸುತ್ತಿರುತ್ತೀರಿ - ನಮ್ಮ ನಂಬರ್ ಯಾವಾಗ ಬರುವುದು, ನಮ್ಮ ನಂಬರ್ ಯಾವಾಗ ಬರುವುದು? ಈಗಂತು ತೆರೆದ ನಿಮಂತ್ರಣವಿತ್ತು. ಎಲ್ಲರು ಸರಿಯಾಗಿ ಒಳ್ಳೆಯ ರೀತಿಯಿಂದಿರುತ್ತಿದ್ದೀರಾ? ಬೇಹದ್ದಿನ ಅನುಭವವಾಗುತ್ತಿದ್ದೀರಲ್ಲವೇ? ಸ್ವಲ್ಪ-ಸ್ವಲ್ಪ ಕಷ್ಟವಿದೆಯೇ? ವೃದ್ಧ ಮಾತೆಯರಿಗೆ ಕಷ್ಟವಾಗಿಲ್ಲವೇ? ಲೈನ್ನಲ್ಲಿ ನಿಲ್ಲಿರಿ ಆಗಲೇ ಊಟ ಸಿಗುವುದು. ಲೈನ್ನಲ್ಲಿ ನಿಲ್ಲುವುದರಲ್ಲಿ ಸುಸ್ತಾಗುವುದಿಲ್ಲವೇ? ಮಜಾ ಬರುವುದೇ? ಇಷ್ಟು ದೊಡ್ಡ ಪರಿವಾರ ಯಾವಗಾದರೂ ಸಿಗುತ್ತದೆಯೇ! ಪರಿವಾರವನ್ನು ನೋಡಿ ಹರ್ಷಿತರಾಗುತ್ತಿರಲ್ಲವೇ! ಭಕ್ತಿ ಮಾರ್ಗದ ಮೇಳೆಯಿಂದಂತು ಒಳ್ಳೆಯ ಮೇಳವಾಗಿದೆಯಲ್ಲವೇ? ಮತ್ತು ಎರಡು ದಿನ ಹೆಚ್ಚಿಸಿದರೆ ಬಸ್ಸಿನ ಖರ್ಚಾಗುತ್ತದೆಯೇ? ಮನೆಯ ನೆನಪು ಬರುತ್ತದೆಯೇ? ನೌಕರಿಯ ನೆನಪು ಬರುವುದಿಲ್ಲವೇ? ಇದು ಸಹ ಏನಾದರೂ ನವೀನತೆಯಿರಬೇಕಲ್ಲವೇ ಈ ಮೇಳವು ಸಹ ನವೀನತೆಯಾಯಿತು. ನವೀನತೆಯ ಅನುಭವ ಮಾಡಿದಿರಿ. ಈಗ ಮತ್ತೆ ಹಳೆಯ ಮಾತುಗಳು ಬರುವುದಿಲ್ಲ, ಹೊಸ ಮಾತುಗಳು ಬರುತ್ತವೆ! ಹೊಸ ಮಾತು ಇಷ್ಟವಾಗುತ್ತೋ ಅಥವಾ ಹಳೆಯದೋ? ಹೊಸ ಮಾತು ಚೆನ್ನಾಗೆನಿಸುತ್ತದೆ. ಒಳ್ಳೆಯದು.

ನಾಲ್ಕಾರು ಕಡೆಯ ಸರ್ವ ಆತ್ಮಿಕ ಪವಿತ್ರತಯ ವ್ಯಕ್ತಿತ್ವಯುಳ್ಳವರು ವಿಶೇಷ ಆತ್ಮರಿಗೆ, ಸದಾ ಆದಿಯಿಂದ ಅಂತ್ಯದವರೆಗೆ ವ್ಯಕ್ತಿತ್ವದ ಹೊಳಪು ತೋರಿಸುವಂತಹ ಶ್ರೇಷ್ಠ ಆತ್ಮರೇ, ಸದಾ ಪವಿತ್ರತೆ, ಸ್ವಚ್ಛತೆಯ ಶಕ್ತಿಯಿಂದ ಸ್ವಯಂನ್ನು ಮತ್ತು ವಿಶ್ವವನ್ನು ಪರಿವರ್ತನೆ ಮಾಡುವಂತಹ ವಿಶ್ವ ಪರಿವರ್ತಕ ಆತ್ಮರೇ, ಸದಾ ನಿಮಿತ್ತ ಭಾವದಿಂದ ಸೇವಾಧಾರಿಗಳಾಗಿ ಪ್ರತ್ಯಕ್ಷಫಲದ ಅನುಭವ ಮಾಡುವಂತಹ ಅನುಭವಿ ಆತ್ಮರಿಗೆ ಬಾಪ್ದಾದಾರವರ ನೆನಪು-ಪ್ರೀತಿ ಮತ್ತು ನಮಸ್ತೆ.

ದಾದಿಯರ ಜೊತೆ:- ಮೇಳವು ಚೆನ್ನಾಗಿತ್ತೇನು? ಯಾವುದೇ ಕಷ್ಟವು ಆಗಿಲ್ಲವೇ? ಎಲ್ಲರ ಶುಭ ಸಂಕಲ್ಪ ಮತ್ತು ಉಮಂಗ

ಉತ್ಸಾಹದ ಸಂಕಲ್ಪದಿಂದ ಸಫಲತೆ ಇದ್ದೇ ಇದೆ. ಈ ಸಂಘಟನೆಯ ಸಂಕಲ್ಪ ಈ ರೀತಿಯಿದೆ ಯಾವುದೇ ಅಸಫಲತೆಯನ್ನು ಸಮಾಪ್ತಿಯಾಗುತ್ತದೆ. ಹೇಗೆ ಕೋಟೆಯಿರುತ್ತದೆಯಲ್ಲವೇ, ಒಂದು ಇಟ್ಟಿಗೆಯು ಏರುಪೇರಾಗುತ್ತದೆ, ಅಲುಗಾಡುತ್ತದೆಯೆಂದಾಗ ಕೋಟೆಯು ಬಲಹೀನವಾಗುತ್ತದೆ. ಎಲ್ಲ ಇಟ್ಟಿಗೆಗಳು ಗಟ್ಟಿಯಾಗಿವೆ ಎಂದಾಗ ಕೋಟೆಯು ಅಲುಗಾಡುವುದಿಲ್ಲ. ವಿಜಯವಿದೆ. ಇದು ಸಹ ಸಂಘಟನೆಯಿಂದ ಉಮಂಗ ಉತ್ಸಾಹ ಮತ್ತು ಶ್ರೇಷ್ಠ ಸಂಕಲ್ಪದಿಂದ, ಸಹಯೋಗದಿಂದ ಸಫಲತೆಯಿದೆ. ಒಳ್ಳೆಯದೆನಿಸುತ್ತದೆ ಮತ್ತು ಸಮಯ ಪ್ರತಿ ಸಮಯ ಇನ್ನೂ ಹೆಚ್ಚು ಅನುಭವ ಮಾಡುತ್ತಹೋಗುತ್ತಾರೆ. ಮೊದಲನೇ ಪ್ರಶ್ನೆಯಿರುತ್ತಿತ್ತು ಆಗುತ್ತದೆಯೇ? ಆದರೆ ಏನು ಯೋಚಿಸುತ್ತೀರಿ ಅದರಲ್ಲಿ ಸಫಲತೆಯಿದ್ದೇ ಇದೆ. ಸಫಲತಾ ಮೂರ್ತರ ವರದಾನ ಸಂಘಟನೆಯ ಶಕ್ತಿಗೆ ಸಿಗುವುದು. ಬಾಪ್ದಾದಾ ಸದಾ ಗುಡ್ಮಾರ್ನಿಂಗ್, ಗುಡ್ನೈಟ್ ಮಾಡುತ್ತಾರೆ. ಒಳ್ಳೆಯದು ಡಬಲ್ ವಿದೇಶಿಯರು ಹಾರುತ್ತಿದ್ದೀರಲ್ಲವೇ. ಒಳ್ಳೆಯದು. ಓಂ ಶಾಂತಿ.

**ವರದಾನ:** ವರದಾನ: ಸ್ವರಾಜ್ಯದ ಅಧಿಕಾರಿಯಾಗಿದ್ದು ಕರ್ಮೇಂದ್ರಿಯಗಳನ್ನು ಆದೇಶದನುಸಾರವಾಗಿ ನಡೆಸುವಂತಹ ಅಕಾಲಸಿಂಹಾಸನದಿಂದ ಹೃದಯ ಸಿಂಹಾಸನಾಧೀಶ ಭವ.

ನಾನು ಅಕಾಲ ಸಿಂಹಾಸನಾಧೀಶ ಆತ್ಮನಾಗಿದ್ದೇನೆ ಅರ್ಥಾತ್ ಸ್ವರಾಜ್ಯಾಧಿಕಾರಿ ರಾಜಾ ಆಗಿದ್ದೇನೆ. ಹೇಗೆ ರಾಜನು ಯಾವಾಗ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ, ಆಗ ಎಲ್ಲಾ ಕರ್ಮಚಾರಿಗಳು ಆದೇಶದನುಸಾರವಾಗಿ ನಡೆಯುತ್ತದೆ. ಹಾಗೆಯೇ ಸಿಂಹಾಸನಾಧೀಶನಾಗುವುದರಿಂದ ಈ ಕರ್ಮೇಂದ್ರಿಯಗಳು ಸ್ವತಹವಾಗಿಯೇ ಆದೇಶದಂತೆ ನಡೆಯುತ್ತದೆ. ಯಾರು ಅಕಾಲ ಸಿಂಹಾಸನಾಧಿಕಾರಿ ಆಗಿರುತ್ತಾರೆ, ಅವರಿಗಾಗಿ ತಂದೆಯ ಹೃದಯ ಸಿಂಹಾಸನವು ಇದ್ದೇ ಇದೆ, ಏಕೆಂದರೆ ಆತ್ಮನೆಂದು ತಿಳಿಯುವುದರಿಂದ ತಂದೆಯದೇ ನೆನಪು ಬರುತ್ತದೆ, ನಂತರ ದೇಹವೂ ಇಲ್ಲ, ದೇಹದ ಸಂಬಂಧವೂ ಇಲ್ಲ, ಪದಾರ್ಥವೂ ಇಲ್ಲ, ಒಬ್ಬ ತಂದೆಯೇ ಪ್ರಪಂಚವಾಗುತ್ತಾರೆ. ಆದ್ದರಿಂದ ಅಕಾಲ ಸಿಂಹಾಸನಾಧಿಕಾರಿಯು ತಂದೆಯ ಹೃದಯ ಸಿಂಹಾಸನಾಧಿಕಾರಿಯು ಸ್ವತಹವಾಗಿಯೇ ಆಗುತ್ತಾನೆ.

**ಸ್ಲೋಗನ್:** ಸ್ಲೋಗನ್: ನಿರ್ಣಯ ಮಾಡುವ, ಪರಿಶೀಲಿಸುವ ಹಾಗೂ ಗ್ರಹಿಸುವ ಶಕ್ತಿಯನ್ನು ಧಾರಣೆ ಮಾಡುವುದೇ ಹೋಲಿ ಹಂಸ ಆಗುವುದಾಗಿದೆ.